ನಿರ್ದೇಶನಗಳಂತೆ ದಿನಾಂಕ: 27–4–1978ರ ನಂತರದ ಅರಣ್ಯ ಅತಿಕ್ರಮಣಗಳನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

ಭಾರತ ಸರ್ವೋಚ್ಚ ನ್ಯಾಯಾಲಯವು 202/1995ರ ರಿಟ್ ಅರ್ಜಿ ದಾವೆಯ 703 ಐ.ಎ.ಗೆ ಸಂಬಂಧಿಸಿದಂತೆ ದಿನಾಂಕ: 3–5–2002ರ ತೀರ್ಪಿನಲ್ಲಿ ದಿನಾಂಕ: 27–4–1978ರ ನಂತರದ ಎಲ್ಲಾ ಅರಣ್ಯ ಅತಿಕ್ರಮಣಗಳನ್ನು ತೆರವುಗೊಳಿಸುವಂತೆ ಸಹ ಹೇಳಿದೆ.

ಆದುದರಿಂದ ಈ ಅತಿಕ್ರಮದಾರರಿಗೆ ಬದಲಿ ವ್ಯವಸ್ಥೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ವಿಧಾನ ಸಭೆ

588 ಶ್ರೀ ಸಿದ್ದು ಸವದಿ (ತೇರದಾಳ್)

ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು

ಅ) ಬನಹಟ್ಟಿ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ.

ಬಂದಿದೆ.

ಕೃಷ್ಣಾ ನದಿ ಮೂಲದಿಂದ ನೀರು ಸರಬರಾಜು ಕೈಗೊಳ್ಳಲು ರೂ.17.18 ಕೋಟಿಗಳಿಗೆ ವಿವರವಾದ ಯೋಜನಾ ವರದಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯು ತಯಾರಿಸಿದ್ದು, ಈ ಯೋಜನೆಯ ಅಂದಾಜು ಪತ್ರಿಕೆಗೆ ಒಪ್ಪಿಗೆ ಸೂಚಿಸಿ ಮೇಲು ರುಜು ಮಾಡಲು ಹಾಗೂ ಅವಶ್ಯ ಠರಾವನ್ನು ಕಳುಹಿಸಲು ಸ್ಥಳೀಯ ಸಂಸ್ಥೆಯನ್ನು (ರಬಕವಿ–ಬನಹಟ್ಟಿ ನಗರ ಸಭೆ) ಕೋರಲಾಗಿದೆ.

ಆ) ಹಾಲಿ ಇರುವ ಯೋಜನೆ 45 ವರ್ಷಗಳಷ್ಟು ಹಿಂದಿನದ್ದಾಗಿದ್ದು, ಜನಸಂಖ್ಯೆ ಹತ್ತಾರು ಪಟ್ಟು ಬೆಳೆದಿರುವುದರಿಂದ ಹೊಸ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯಿಂದ ಸೂಕ್ತ ಪ್ರಸ್ತಾವನೆಯನ್ನು ಪಡೆದು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗುವುದು ತದನಂತರ ಈ ಯೋಜನೆಯನ್ನು ಪ್ರಾರಂಭಿಸಲಾಗುವುದು.

ಇ) ತುರ್ತು ಅಗತ್ಯವಿರುವುದರಿಂದ ಸದರೀ ಯೋಜನೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

2009–10 ನೇ ಸಾಲಿನ ಮಂಡಳಿಯ ಕ್ರಿಯಾ ಯೋಜನೆಯಲ್ಲಿ ಈ ಯೋಜನೆಯನ್ನು ಸೇರಿಸಲಾಗಿದೆ.

ನಗರಾಭಿವೃದ್ಧಿ, ಕಾನೂನು
ಮತ್ತು ಸಂಸದೀಯ ವ್ಯವಹಾರ ಸಚಿವರು

ಕರ್ನಾಟಕ ವಿಧಾನ ಸಭೆ

13ನೇ ವಿಧಾನಸಭೆ 3ನೇ ಅಧಿವೇಶನ

488 ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಮಾನ್ಯ ಲೋಕೋಪಯೋಗಿ ಸಚಿವರು

ಅ) ರಾಜ್ಯದಲ್ಲಿ ನಬಾರ್ಡ್ ಯೋಜನೆಯ ಅನುಷ್ಠಾನಕ್ಕೆ ಯಾವ ಯಾವ ಮಾನದಂಡ ಅನುಸರಿಸಲಾಗುತ್ತಿದೆ?

ನಬಾರ್ಡ್ ಸಾಲ ಸಹಾಯದ ಆರ್.ಐ.ಡಿ.ಎಫ್ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ಮೂಲ ಸೌಲಭ್ಯ ಕಲ್ಪಿಸುವ ಕಾಮಗಾರಿಗಳನ್ನು ಕೈಗೊಳ್ಳಬೇಕಿದೆ. ಆದ್ದರಿಂದ ಲೋಕೋಪಯೋಗಿ ಇಲಾಖೆಯಡಿ ಗ್ರಾಮೀಣ ಪ್ರದೇಶದ ಗ್ರಾಮೀಣ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಇದರಲ್ಲಿ ಬ್ರಿಡ್ಜ್ ಕಾಮಗಾರಿಗಳಿಗೆ ಎಷ್ಟು ಮೀಸಲಿಡಲಾಗಿದೆ?

ನಬಾರ್ಡ್‌ನ ಆರ್‌ಐಡಿಎಫ್ ಯೋಜನೆಯಲ್ಲಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿದ್ದು, ಸೇತುವೆಗಳಿಗೆ ಪ್ರತ್ಯೇಕ ಹಂಚಿಕೆ ಮಾಡಲಾಗುವುದಿಲ್ಲ.

ಇ) ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2008–09 ಹಾಗೂ 2009–10ನೇ ಸಾಲಿನಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಮಂಜೂರಾಗಿರುವ ವಿವಿಧ ರೀತಿಯ ಕಾಮಗಾರಿಗಳು ಯಾವುವು? ಹಾಗೂ ಈ ಕಾಮಗಾರಿಗಳು ಯಾವ ಹಂತದಲ್ಲಿವೆ (ವಿವರ ಒದಗಿಸುವುದು)

I. <u>2008–09ರಲ್ಲಿ ಮಂಜೂರಾದ ಕಾಮಗಾರಿಗಳು :–</u>

ಹೆಬ್ಬಳಲು ಕ್ರಾಸ್‌ನಿಂದ ರಘುವನಪಾಳ್ಯ, ಕಾವೇರಯ್ಯನಪಾಳ್ಯ ಗೊಲ್ಲರಹಟ್ಟಿ ಮಾರ್ಗ ಗಂಗೋನಹಳ್ಳಿ ಸೇರುವ ರಸ್ತೆ ಅಭಿವೃದ್ಧಿ–90.00 ಲಕ್ಷ ರೂ. ಈ ಕಾಮಗಾರಿಗೆ ಗುತ್ತಿಗೆ ನಿಗದಿಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

II. 2009–10ನೇ ಸಾಲಿನಲ್ಲಿ ನಬಾರ್ಡ್‌ನಿಂದ ಇನ್ನೂ ಅನುಮೋದನೆ ಪಡೆಯಬೇಕಿರುತ್ತದೆ.